ದಿನಾಂಕ: 23-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ.ಕೆ.ಎನ್. ವಕೀಲರಿಂದಃ**

ನೀವೇ ಪ್ರತಿವಾದಿ ಸ್ವಾಧೀನವಿರುವ ವಡ್ಲಿಮನುಗನಹಳ್ಳಿ ಗ್ರಾಮದ ಸ.ನಂ.35/3, 3 ಎಕರೆ 16 ಗುಂಟೆ ಜಮೀನಿನಗೆ ತಂಟೆ ತಕರಾರು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ತಂಟೆ-ತಕರಾರು ಮಾಡಿದ್ದಕ್ಕೆ ಪ್ರತಿವಾದಿಗಳು ಅಸಲು ದಾವೆ ಸಂ.62/2014 ರಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ನಿಮ್ಮ, ನಿಮ್ಮ ತಾಯಿ, ಪುಟ್ಟಮಾದೇಗೌಡ, ದಯಾನಂದ ಮತ್ತು ಸಿದ್ದಮ್ಮ ರವರ ವಿರುದ್ಧ ದಾವೆ ಹೂಡಿರುತ್ತಾರೆಂದರೆ ಸಾಕ್ಷಿ ಅವರೇ ನಮಗೆ ತಂಟೆ ಮಾಡಿ, ಅವರೇ ದಾವೆ ಹೂಡಿದ್ದಾರೆಂದು ಹೇಳುತ್ತಾರೆ. ಸದರಿ ದಾವೆಯು ಇನ್ನೂ ಬಾಕಿ ಇದ್ದು, ಇದೇ ದಿನದಂದು ಚಾಲ್ತಿಯಲ್ಲಿದೆ ಎಂದರೆ ಸರಿ.

ಪ್ರತಿವಾದಿ ತಾನು ಸ್ವಾಧೀನವಿರುವ 3 ಎಕರೆ 16 ಗುಂಟೆ ಪೈಕಿ 2 ಎಕರೆ 36 ಗುಂಟೆ

ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ: ತಮ್ಮಣ್ಣನಾಯಕ, ಪಶ್ಚಿಮಕ್ಕೆ: ಕನಗಾಲು ರಸ್ತೆ, ಉತ್ತರಕ್ಕೆ: ಮಾದನಾಯಕ ಮತ್ತು ದಕ್ಷಿಣಕ್ಕೆ: ಸಣ್ಣಮ್ಮ ಹಾಗೂ 20 ಗುಂಟೆ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ: ಸಣ್ಣಮ್ಮ, ಪಶ್ಚಿಮಕ್ಕೆ: ಶಾಲೆ, ಉತ್ತರಕ್ಕೆ: ಸಣ್ಣಮ್ಮ ಮತ್ತು ದಕ್ಷಿಣಕ್ಕೆ: ಪಂಚವಳ್ಳಿ ರಸ್ತೆ ಎಂದರೆ ಸಾಕ್ಷಿ 2 ಎಕರೆ 29 ಗುಂಟೆ ಜಮೀನಿನಲ್ಲಿ ಮೇಲೆ ಹೇಳಿದ ಚೆಕ್ಕುಬಂಧಿಯಲ್ಲಿ ನಾವು ಸ್ವಾಧೀನ ಇದ್ದು, ಉಳಿದ 20 ಗುಂಟೆ ಸ್ವಾಧೀನ ಪ್ರತಿವಾದಿ ಇದ್ದಾರೆ ಎಂದು ಹೇಳುತ್ತಾರೆ. ನೀವು ಮೇಲೆ ಹೇಳಿದ 2 ಎಕರೆ 29 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದೇನೆಂದು ಹೇಳುತ್ತಿರುವುದು ಸುಳ್ಳು, ನೀವಾಗಲೀ, ನಿಮ್ಮ ತಂದೆ ಹಾಗೂ ತಾತ ಎಂದಿಗೂ ಸದರಿ ಜಮೀನಿನ ಸ್ವಾಧೀನಾನುಭವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಿಮ್ಮ ಪಿತ್ರಾರ್ಜಿತ ಆಸ್ತಿ, ಅದು ನಿಮ್ಮ ಸ್ವಾಧೀನಾನುಭವದಲ್ಲಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನೀವಾಗಲೀ, ನಿಮ್ಮ ತಂದೆ ಹಾಗೂ ತಾತ ಎಂದಿಗೂ ಸ್ವಾಧೀನಾನುಭವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕರಾಮೇಗೌಡರಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಚೆಕ್ಕುಬಂಧಿ ನೀಡಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಿಕ್ಕರಾಮೇಗೌಡರಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸ.ನಂ.35/3 ಮೂಲತಃ ಚಿಕ್ಕರಾಮೇಗೌಡರ ತಂದೆಗೆ ಸೇರಿದ್ದು, ವಾದಿಗಳಿಗೆ ಸ.ನಂ.35/3 ರಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

ನೀವು ತಾಲ್ಲೂಕು ಕಚೇರಿಯಲ್ಲಿ ದಸ್ತಾವೇಜು ಬರವಣಿಗೆದಾರರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ದಸ್ತಾವೇಜು ಬರವಣಿಗೆದಾರರ ಕಚೇರಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದೀರಾ ಎಂದು ಹೇಳಿ, ಪಿರಿಯಾಪಟ್ಟಣದ ಪೊಲೀಸ್ ಠಾಣೆಯಲ್ಲಿ ನಿಮ್ಮ ವಿರುದ್ಧ ಫೋರ್ಜರಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

O.S .No. 282/2013
PW-1

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.